CW.10 PW.5

**ಅಧಿಕ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ., ಕನಕಪುರ ರವರ ನ್ಯಾಯಾಲಯದಲ್ಲಿ**

# CC No. 929/2018

| | |
|---|---|
| ಸಾಕ್ಷಿದಾರರ ಹೆಸರು | ಬಸವರಾಜು |
| ತಂದೆಯ ಹೆಸರು | ಚೆನ್ನಬಸವೇಗೌಡ |
| ವಯಸ್ಸು | 54 ವರ್ಷ |
| ವೃತ್ತಿ | ಎ ಎಸ್ ಐ, ಕನಕಪುರ ಗ್ರಾಮಾಂತರ ಪೋಲೀಸ್ ಠಾಣೆ |
| ವಿಳಾಸ | ಕನಕಪುರ |
| ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ | 29.12.2025 |

**ಮುಖ್ಯ ವಿಚಾರಣೆ ಎ ಪಿ ಪಿ ರವರಿಂದಃ-**

ನಾನು 2017 ರಿಂದ 2022 ವರೆಗೂ ಮುಖ್ಯ ಪೇದೆಯಾಗಿ ಕೋಡಿಹಳ್ಳಿ ಠಾಣೆಯಲ್ಲಿ ನನ್ನ ಕರ್ತವ್ಯ ನಿರ್ವಹಿಸುತ್ತಿರುತ್ತೇನೆ.

ಆರೋಪಿತರನ್ನು ನೋಡಿರುತ್ತೇನೆ. ಈ ದಿನ ನ್ಯಾಯಾಲಯದಲ್ಲಿ ಹಾಜರಿರುತ್ತಾರೆ.

ದಿಃ 22.02.2018 ರಂದು ಸಂಜೆ 3 ಗಂಟೆ ಸಮಯದಲ್ಲಿ ಮಡಿವಾಳ ಗ್ರಾಮದ ವಾಸಿಯಾದ ಚಾಸಾ-1 ರವರು ನೀಡಿದ ದೂರಿನ ಮೇರೆಗೆ ನಮ್ಮ ಠಾಣಾ ಮೊಕದ್ದಮೆ ಸಂಖ್ಯೆ 50/2018 ಎಂದು ಪ್ರ.ವವ ದಾಖಲಿಸಿ ಮೂಲ ಪ್ರತಿಯನ್ನು ಮಾನ್ಯ ನ್ಯಾಯಾಲಯಕ್ಕೆ ಹಾಗೂ ಮತ್ತೊಂದು ಪ್ರತಿಯನ್ನು ಮೇಲಾಧಿಕಾರಿಗೆ ಕಳುಹಿಸಿರುತ್ತೇನೆ.

ದಿಃ23.02.2018 ರಂದು ಕೃತ್ಯ ನಡೆದ ಸ್ಥಳಕ್ಕೆ ಭೇಟಿ ಮಾಡಿ ಚಾಸಾ-1 ರವರು ತೋರಿಸಿದ ಸ್ಥಳದಲ್ಲಿ ಚಾಸಾ-1 ಮತ್ತು ಚಾಸಾ-7 ರವರ ಸಮಕ್ಷಮ ಪಂಚನಾಮೆಯನ್ನು ಮಧ್ಯಾಹ್ನ 3.30 ರಿಂದ 4

ಗಂಟೆಯವರೆಗೂ ಮಾಡಿರುತ್ತೇನೆ. ಆರೋಪಿತರು ನ್ಯಾಯಾಲಯಕ್ಕೆ ಹಾಜರಾಗಿ ಜಾಮೀನು ಪಡೆದಿರುತ್ತಾರೆ.

ನಂತರ ನಾನು ಪ್ರಸ್ತುತ ಪ್ರಕರಣದಲ್ಲಿ ಸಾಕ್ಷಿದಾರರಾದ ಚಾಸಾ-1, ಚಾಸಾ-2 ರಿಂದ ಚಾಸಾ-6 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ನಂತರ ಚಾಸಾ-9 ರವರಿಂದ ದಿಃ14.05.2018 ರಂದು ಗಾಯದ ಪ್ರಮಾಣ ಪತ್ರವನ್ನು ಸ್ವೀಕರಿಸಿರುತ್ತೇನೆ. ನಂತರ ಆರೋಪಿತರ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

ಸಾಕ್ಷಿಗೆ ಸದರಿ ಪ್ರಕರಣದಲ್ಲಿ ದೂರನ್ನು ತೋರಿಸಲಾಗಿ ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-1 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಸದರಿ ಪ್ರಕರಣದಲ್ಲಿ ಪ್ರ.ವವ ತೋರಿಸಲಾಗಿ ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ಈಗ ನಿಪಿ-7 ಎಂದು ಸಾಕ್ಷಿಯ ಸಹಿಯನ್ನು ನಿಪಿ-7(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಸದರಿ ಪ್ರಕರಣದಲ್ಲಿ ಸ್ಥಳ ಪಂಚನಾಮೆಯನ್ನು ತೋರಿಸಲಾಗಿ ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-2 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಸದರಿ ಪ್ರಕರಣದಲ್ಲಿ ಗಾಯದ ಪ್ರಮಾಣ ಪತ್ರವನ್ನು ತೋರಿಸಲಾಗಿ ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ಈಗ ನಿಪಿ-8 ಎಂದು ಸಾಕ್ಷಿಯ ಸಹಿಯನ್ನು ನಿಪಿ-8(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಸದರಿ ಪ್ರಕರಣದಲ್ಲಿ ಚಾಸಾ-3 ರವರ ಹೇಳಿಕೆಯ ದಾಖಲೆಯನ್ನು ತೋರಿಸಲಾಗಿ ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-4 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು.

CW.10 PW.5

ಸಾಕ್ಷಿಗೆ ಸದರಿ ಪ್ರಕರಣದಲ್ಲಿ ಚಾಸಾ-5 ರವರ ಹೇಳಿಕೆಯ ದಾಖಲೆಯನ್ನು ತೋರಿಸಲಾಗಿ ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-5 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಸದರಿ ಪ್ರಕರಣದಲ್ಲಿ ಚಾಸಾ-6 ರವರ ಹೇಳಿಕೆಯ ದಾಖಲೆಯನ್ನು ತೋರಿಸಲಾಗಿ ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-6 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿಪಿ-6(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದ**

ಆರೋಪಿತರನ್ನು ಇದೇ ಮೊದಲ ಬಾರಿಗೆ ನೋಡುತ್ತಿದ್ದೇನೆಂದರೆ ಸರಿಯಲ್ಲ. ನಿಪಿ-2 ನ್ನು ಠಾಣೆಯಲ್ಲೇ ಕುಳಿತು ಬನಾವಟ್ ಮಾಡಲಾಗಿದೆ ಎಂದರೆ ಸರಿಯಲ್ಲ. ನಿಪಿ-8 ನ್ನು ನಾನು ಠಾಣೆಯಲ್ಲೇ ಬನಾವಟ್ ಮಾಡಿಸಿ ಸಹಿ ಮಾಡಿರುತ್ತೇನೆಂದರೆ ಸರಿಯಲ್ಲ. ಚಾಸಾ-1 ರಿಂದ 6 ರವರ ಹೇಳಿಕೆಗಳನ್ನು ಸಹ ನಾನು ಠಾಣೆಯಲ್ಲಿ ಸೃಷ್ಟಿ ಮಾಡಿರುತ್ತೇನೆಂದರೆ ಸರಿಯಲ್ಲ. ಕೇವಲ ಚಾಸಾ-1 ರವರಿಗೆ ಅನುಕೂಲವಾಗುವ ರೀತಿಯಲ್ಲಿ ಯಾವುದೇ ಗಲಾಟೆಯಾಗದೇ ಇದ್ದರೂ ಸಹಿತ ಠಾಣೆಯ ಅಂಕಿಅಂಶಗಳಿಗೋಸ್ಕರ ಸುಳ್ಳು ದೂರನ್ನು ದಾಖಲು ಮಾಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ**

**ಓ ಹೇ ಕೇ ಸರಿ ಇದೆ**

**ಅಧಿಕ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ.,**

**ಕನಕಪುರ .**